

ಆ ಕ್ರೇನಿನ ಕಬಂಧ ಬಾಹುಗಳು ಮೇಲಕ್ಕೆ ಚಲಿಸುತ್ತಿದ್ದಂತೆ, ಅಲಿಯ ಕತ್ತನ್ನು ಸುತ್ತಿರುವ ಬಿಳಿಯ ಹಗ್ಗ ಬಿಗಿಯಾಗುತ್ತಾ ಹೋಯಿತು. ಅವನ ದೇಹ ಭೂಮಿ ಮತ್ತು ಆಕಾಶಗಳ ನಡುವೆ ಹೊಯ್ದಾಡುತ್ತಿದ್ದಾಗ, ಬಹುಶಃ ಆ ಕ್ರೇನ್ ಚಾಲಕನ ಮನಸ್ಸಿನಲ್ಲಿ ಇದ್ದುದೊಂದೇ ವಿಷಯ. ಅಲಿ ತನ್ನ ಕೊನೆಯಾಸೆಯಾಗಿ ಕೇಳಿದ, ಅವನ ಬಾಯಾರಿದ ನಾಲಗೆಗೆ ಬೇಕೆನಿಸಿದ್ದ ನೀರು, ತಾನು ತನ್ನ ಕಾರಿನಿಂದ ತೆಗೆದು ಕೊಟ್ಟಿದ್ದ ಬಾಟಲಿಯಲ್ಲಿದ್ದದ್ದು ಎಂಬುದು. ನೇಣು ಹಗ್ಗವನ್ನು ಧರಿಸಿದ, ಕೈಗಳನ್ನು ಹಿಂದೆ ಕಟ್ಟಿದ ಅಲಿ(ಅಥವಾ ಅವನ ಸರೀಕರು ಕರೆದಂತೆ –ಪೋಕರಿ ಅಲಿ) ತನ್ನನ್ನು ಗಲ್ಲಿಗೇರಿಸುವುದಕ್ಕೆ ಸ್ವಲ್ಪ ಮೊದಲು ನೀರು ಕೇಳಿದ್ದ. ಅವನ ಕೊನೆಯಾಸೆಯನ್ನು ಪೂರ್ತಿಗೊಳಿಸಲಿಕ್ಕೆ ಒಬ್ಬ ಅಧಿಕಾರಿ ಆ ಬಾಟಲಿಯನ್ನು ಅಲಿಯ ಬಾಯಿಗೆ ಇರಿಸಿ ನೀರು ಕುಡಿಸಿದ್ದ.

ಒಂದೆರಡು ಮೀಟರ್ ದೂರದಲ್ಲಿ, ಇನ್ನೊಂದು ವಧಾಸ್ಥಾನ. ಅಲಿರೆಝಾ, (ಅವನ ಸ್ನೇಹಿತರು ಹೇಳಿದಂತೆ, ಏಡಿ ಅಲಿರೆಝಾ) ತನ್ನ ತಲೆಯನ್ನು, ತನ್ನನ್ನು ಗಲ್ಲಿಗೇರಿಸುವ ಕ್ರಿಯೆಯ ಉಸ್ತುವಾರಿ ಹೊತ್ತಿದ್ದ ಮುಸುಕುಧಾರಿ ಆಫೀಸರ್‌ನ ಭುಜಕ್ಕೆ ಒರಗಿಸಿದ್ದ ಅಲಿರೆಝಾನ ಕೊನೆಯ ಗಳಿಗೆಗಳಲ್ಲಿ ಆತನ ಜೊತೆಗಿದ್ದದ್ದು ಆ ಅಧಿಕಾರಿ ಮಾತ್ರ. ಅಲಿರೆಝಾನ ಮುಖ ಕಣ್ಣೀರಿನಲ್ಲಿ ತೊಯ್ದಿತ್ತು.

21 ವಯಸ್ಸಿನ ಅಲಿ ಮತ್ತು 24 ರ ಅಲಿರೆಝಾ, ಅವರನ್ನು ಭಾನುವಾರ (20 ಜನವರಿ, 2013) ದಂದು ಅವರನ್ನೊಮ್ಮೆ ಕೊನೆಯ ಬಾರಿಗೆ ನೋಡಲು ಬಂದಿದ್ದ ಅವನ ಸ್ನೇಹಿತರ ಅಳು ಮತ್ತು ಅಲ್ಲಿ ಸೇರಿದ್ದ ಕೆಲವೇ ಕೆಲವು ಹೆಂಗಸರ ಆಕ್ರಂದನದ ಮಧ್ಯೆ ಸೂರ್ಯ ಮೂಡುವ ಕೆಲವು ನಿಮಿಷಗಳ ಮೊದಲು, ಗಲ್ಲಿಗೇರಿಸಲಾಯಿತು. ಅವರ ಕತ್ತಿನ ಸುತ್ತ ಸುತ್ತಿದ್ದ ಹಗ್ಗ ಬಿಗಿಗೊಳ್ಳುತ್ತಿದ್ದಂತೆ, ಹೆಚ್ಚೇನೂ ಪ್ರಯಾಸವಿಲ್ಲದೆ, ಕಣ್ಣು ಮಿಟುಕಿಸುವುದರಲ್ಲಿ, ಅವರ ಪ್ರಾಣ ಹೋಗಿತ್ತು. ಹಗ್ಗದಿಂದ ಜಗ್ಗಿದ ಅವರಿಬ್ಬರ ದೇಹವನ್ನು ಕೆಲವು ನಿಮಿಷಗಳ ಕಾಲ ಹಾಗೆಯೇ ಬಿಡಲಾಗಿತ್ತು.

ಐವತ್ತೆರಡು ದಿನಗಳ ಹಿಂದೆ ಹೂಡಲಾದ ಒಂದು ಮೊಕದ್ದಮೆ ಕೊನೆಯಾದದ್ದು ಈ ರೀತಿ. 1 ಡಿಸೆಂಬರ್, 2012 ರಂದು ಇಬ್ಬರು ಯುವಕರು 17, ಶಾರಿಯಾರ್ ರಸ್ತೆಯಲ್ಲಿರುವ ಒಂದು ಸಣ್ಣ ಕಾಫೀ ಕ್ಲಬ್ಬಿನಲ್ಲಿ, ಇನ್ನಿಬ್ಬರು ಸ್ನೇಹಿತರ(ಮೆಹರ್ದಾದ್ ಮತ್ತು ಮಿಲಾದ್) ಜೊತೆ ಕೂತು ಒಂದು ದರೋಡೆ ಮಾಡುವ ಯೋಜನೆ ಹಾಕಿಕೊಂಡಿದ್ದರು. ಯೋಜನೆ ಹಾಕಿದ ಕೆಲವು ಗಂಟೆಗಳಲ್ಲೇ ಖೇರಾದ್‌ಮಂದ್ ಜನೌಬಿ ರಸ್ತೆಯ ಜಮಾಲ್ ಓಣಿಯಲ್ಲಿ ಅದನ್ನು ಕಾರ್ಯಗತ ಮಾಡಿಯೇಬಿಟ್ಟರು. ಅಲಿರೆಝಾ, ತನ್ನನ್ನು ಬಂಧಿಸಿದ ನಂತರ, ಅಸೆಮನ್ ಪತ್ರಿಕೆಗೆ ಕೊಟ್ಟ ಸಂದರ್ಶನದಲ್ಲಿ, ಅಂದು ತಾವೇಕೆ ದರೋಡೆಯ ಯೋಜನೆಯನ್ನು ಹಾಕಿದ್ದೆವು ಎಂದು ವಿಷದವಾಗಿ ಹೇಳಿದ: "ನಾವೆಲ್ಲ ಅಂದು ಕಾಫಿ ಕ್ಲಬ್ಬಿನಲ್ಲಿ ಕುಳಿತಿದ್ದೆವು. ನನ್ನ ಮನಸ್ಸಿನ ಸ್ಥಿತಿಯೂ ಅಷ್ಟು ಚೆನ್ನಾಗಿರಲಿಲ್ಲ. ನಮ್ಮ ತಾಯಿಗೆ ಕಾಯಿಲೆಯಾಗಿ ಅವಳಿಗೆ ತಕ್ಷಣ ಶಸ್ತ್ರಚಿಕಿತ್ಸೆ ಆಗಬೇಕಿತ್ತು. ಆಸ್ಪತ್ರೆಯವರು ಚಿಕಿತ್ಸೆ ಪ್ರಾರಂಭಿಸುವ ಮೊದಲೇ ಹಣ ಪಾವತಿಸಬೇಕೆಂದು ಹೇಳಿದ್ದರು. ನನ್ನ ಮುಂದೆ ಕುಳಿತಿದ್ದ ಮೆಹರ್ದಾದ್‌ನಿಗೆ ಯಾವುದೋ ಸಾಲ ವಾಪಸ್ ಮಾಡಲು ಹಣ ಬೇಕಿತ್ತು. ಈ ಹಣ ಕೊಡದಿದ್ದರೆ, ಸಾಲ ಕೊಟ್ಟವನು ಕೋರ್ಟ್‌ನಲ್ಲಿ ದಾವೆ ಹಾಕುವವನಿದ್ದ. ಮೆಹರ್ದಾದ್ ಕೂಡ ಅವನ ತೊಂದರೆಗಳ ಬಗ್ಗೆ ಹೇಳಿಕೊಳ್ಳತೊಡಗಿದ. ಇಷ್ಟರೊಳಗೆ, ಈ ನಮ್ಮ ಪೋಕರಿ ಅಲಿ ನಮ್ಮೊಂದಿಗೆ ಬಂದು ಸೇರಿಕೊಂಡ. ನಾವೆಲ್ಲರೂ ಕೂಡಿ ಕೆಲವು ಸಣ್ಣ ಕಳ್ಳತನ ಮಾಡಿ ಹಣ ಜೋಡಿಸುವುದೆಂದು ನಿರ್ಧರಿಸಿದೆವು. ಮೆಹರ್ದಾದ್ ತನ್ನ ತಮ್ಮ ಮಿಲಾದ್‌ನನ್ನು ಕರೆದ. ನಾವು ಒಂದು ಮೋಟರ್ ಸೈಕಲ್ ಮತ್ತು ಕೊಡಲಿಯನ್ನು ಸಂಪಾದಿಸಿ ನಮ್ಮ ಗುರಿ ಹುಡುಕುತ್ತ ಈ ರಸ್ತೆಗಳಲ್ಲಿ ಅಲೆಯತೊಡಗಿದೆವು."